ಕರ್ನಾಟಕ ರಾಜ್ಯದ ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಲ್ಪಟ್ಟ ನಿರುದ್ಯೋಗಿಗಳ ಬಗ್ಗೆ

೧೧೭೬. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದ ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಲ್ಪಟ್ಟಿರುವ ನಿರುದ್ಯೋಗಿಗಳ ಸಂಖ್ಯೆ ಎಷ್ಟು ?

ಆ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆ ಮತ್ತು ಉದ್ಯೋಗಿಗಳ ಸಂಖ್ಯೆ ಎಷ್ಟು ?

ಇ) ಈ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—

ಅ) ದಿನಾಂಕ ೩೧-೦೩-೧೯೮೮ರಂದು ರಾಜ್ಯದ ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಣಿ ಮಾಡಿಸಿಕೊಂಡಿರುವ ಅಭ್ಯರ್ಥಿಗಳ ಸಂಖ್ಯೆ ೯,೯೦,೨೭೬.

ಆ) ರಾಜ್ಯದ ವಿವಿಧ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳ ಸಂಖ್ಯೆ ೪೬,೮೧೩ದಿನಾಂಕ ೧-೧-೧೯೮೭ ರಲ್ಲಿದ್ದಂತೆ ಒಟ್ಟು ಉದ್ಯೋಗಿಗಳ ಸಂಖ್ಯೆ ೪,೩೩,೦೩೦

ಇ) ಖಾಲಿ ಹುದ್ದೆಗಳನ್ನು ತುಂಬುವುದಕ್ಕೆ ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಸೂಚನೆಗಳನ್ನು ನೀಡಲಾಗಿದೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೇ ಮನೆಗೆ ಒಬ್ಬರಿಗೆ ಕೆಲಸ ಕೊಡುತ್ತೇವೆಂದು ಚುನಾವಣೆಯ ಸಂದರ್ಭದಲ್ಲಿ ಚುನಾವಣೆಯ ಪ್ರಣಾಳಿಕೆಯಲ್ಲಿ ಕೊಟ್ಟಿದ್ದರ . ಅದರಂತೆ ಇಲ್ಲಿಯವರೆಗೆ ಎಷ್ಟು ಜನರಿಗೆ ಕಲಸವನ್ನು ಕೊಚ್ಚಿದ್ದೀರಿ? ಒಂದು ಎರಡನೆಯದಾಗಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮೂರುವರ್ಷಗಳ ಕಾಲ ನೇಮಕಾತಿ ಇಲ್ಲವೆಂದು ಹೇಳಿದ್ದಾರೆ ಇದು ತಮ್ಮ ಮುಂದಿನ ಚುನಾವಣೆಯ ಪ್ರಣಾಳಿಕೆಯ ಆಶ್ವಾಸನೆಯಾಗುತ್ತದೆಯೇ ಎಂಬುದನ್ನು ವಿವರವಾಗಿ ಹೇಳಬೇಕಾ. ಮತ್ತೆ ಸಬ್‌ಇನ್ಸ್‌ಪೆಕ್ಟರ್ ಹುದ್ದೆಗಾಗಿ ಅರ್ಜಿಗಳನ್ನು ಕಾಲ್‌ಫಾರ್ ಮಾಡಿ ಕಳೆದ ಏಪ್ರಿಲ್‌ನಲ್ಲಿಯೇ ತುಂಬುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದರು. ಇದುವರೆಗೆ ನೇಮಕಾತಿಯಾಗಿಲ್ಲ ಏತಕ್ಕೆಂಬುದನ್ನು ತಿಳಿಸಬೇಕು? ಮತ್ತೆ, ಕರ್ನಾಟಿಕ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಇವರು ತಮ್ಮಲ್ಲಿರುವ ಹುದ್ದೆಗಳನ್ನು ತುಂಬುವ ಸಲುವಾಗಿ ಸುಮಾರು ೩೭ ಸಾವಿರ ಅಪ್ಲಿಕೇಷನ್ ತೆಗೆದುಕೊಂಡಿರುತ್ತಾರೆ. ಆದರೆ ಇದುವರೆಗೆ ಏಕೆ ಹುದ್ದೆಗಳನ್ನು ತುಂಬಿಲ್ಲವೆಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಎಸ್ ಕೆ. ಕಾಂತಾ.—ಸರ್ಕಾರಿ ಹುದ್ದೆಗಳನ್ನು ತುಂಬಿಲ್ಲವೆಬುದು ಸರಿಯಲ್ಲ. ೧೯೮೩ ರಿಂದ ೧೯೮೫ರವರೆಗೆ ೨೨೫೦೦ ಹುದ್ದೆಗಳನ್ನು ತುಂಬಲಾಗಿದೆ. ೮೫-೮೬ರಲ್ಲಿ ೩೦೫೫ ಹುದ್ದೆಗಳನ್ನು ತುಂಬಲಾಗಿದೆ. ೮೬-೮೭ರಲ್ಲಿ ೧೦೧೦೨ ಹುದ್ದೆಗಳನ್ನು ೮೭-೮೮ರಲ್ಲಿ ೬೭೫೦ ಹುದ್ದೆಗಳನ್ನು ತುಂಬಲಾಗಿದೆ. ಈಗಾಗಲೇ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಯಾವ ಯಾವ ಸ್ಥಳಗಳಲ್ಲಿ ಖಾಲಿ ಹುದ್ದೆಗಳಿವೆ ಆವುಗಳನ್ನು ತುಂಬಬೇಕೆಂದು ಹೇಳಿದ್ದೇವೆ. ಆದರ ಕಾಲ ಸೂಚಿ ಪ್ರಕಾರ ಪ್ರತಿ ವರ್ಷ ಏಪ್ರಿಲ್ ೧೫ರೊಳಗೆ ಆಯಾಯ ವರ್ಷದಲ್ಲಿ ಉದ್ಭವಿಸುವ ಖಾಲಿ ಸ್ಥಾನಗಳ ವಿವರಗಳನ್ನು ಆಯೆ ಸಮಿತಿಗೆ ಮತ್ತು ನೇಮಕಾತಿ ಪ್ರಾಧಿಕಾರಕ್ಕೆ ಕಳುಹಿಸಬೇಕು. ಅದೇ ವರ್ಷ ಮೇ ೧೫ರೊಳಗೆ ಆಯೆ ಸಮಿತಿಗಳು ಜಾಹಿರಾತುಗೊಳಿಸಬೇಕು. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಕೊನೇ ತಾರೀಖು ಜೂನ್ ೩೦ರೊಳಗೆ ಇರಬೇಕು. ಅರ್ಜಿಗಳ ಪರಿಶೋಧನೆ ಸೆಪ್ಟೆಂಬರ್ ೩೦ರೊಳಗೆ ಮುಗಿಯಬೇಕು. ಪರೀಕ್ಷೆ, ಸಂದರ್ಶನ ಮಾಡಿ ಆಯ್ಕೆ ಬಗ್ಗೆ ಜನವರಿ ೩೦ರೊಳಗೆ ನೇಮಕಾತಿ ಪ್ರಾಧಿಕಾರಕ್ಕೆ ವರದಿ ಸಲ್ಲಿಸಬೇಕು. ಮತ್ತು ಮಾರ್ಚ್ ೩೧ರೊಳಗೆ ನೇಮಕಾತಿ ಆದೇಶವನ್ನು ಹೊರಡಿಸಬೇಕೆಂಬ ಆಜ್ಞೆಯನ್ನು ಈಗಾಗಲೇ ಹೊರಡಿಸಿದ್ದೇವೆ. ಇದು ಜಾರಿಯಲ್ಲಿದೆ. ಯಾವುದೇ ಖಾಲಿ ಹುದ್ದೆಯನ್ನು ಭರ್ತಿ ಮಾಡದೆ ಇಡುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಆದರೆ ಈ ರೀತಿ ಖಾಲಿ ಹುದ್ದೆಗಳನ್ನು ತುಂಬಿಲ್ಲವೆಂಬುದು ಸರಿಯಲ್ಲ. ಈಗಾಗಲೇ ೪ ವರ್ಷಗಳ ಅವಧಿಯಲ್ಲಿ ೬೯೫೦ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.